KAMS510004192019

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್‌ಎಲ್‌ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ನಂಜನಗೂಡು .

**ದಿನಾಂಕ: 29 ನೇ ನವೆಂಬರ್ 2022**

**ಅಸಲು ದಾವಾ ಸಂಖ್ಯೆ 43/2019**

**ವಾದಿ/ಯರುಃ**

ಸಯಿದಾ ಬೇಗಂ ಕೋಂ ಅಹೀಖ್ ಉರ್ ರೆಹಮಾನ್ ಬಿನ್ ಶಫಿ ಉಲ್ಲಾ ಖಾನ್ ಎಫ್
ವಯಸ್ಸು ಸುಮಾರು 26 ವರ್ಷ,
ವಾಸಃ ನಂ. 9/186, ಮುಬಾರಕ್ ಮೊಹಲ್ಲಾ,
ಚಾಮರಾಜನಗರ ಟೌನ್, ಚಾಮರಾಜನಗರ ಜಿಲ್ಲೆ

(ಪ್ರತಿನಿಧಿಸುವವರುಃ ಶ್ರೀ ಜಿ.ಎಸ್ ಸಂತೋಷ್ ಕುಮಾರ್ ನ್ಯಾಯವಾದಿಗಳು)

**-ವಿರುದ್ಧ-**

**ಪ್ರತಿವಾದಿ/ಯರುಃ**

1) ಮುಖ್ಯೋಪಾಧ್ಯಾಯರು, ಸರ್ಕಾರಿ ಬಾಲಕರ ಉರ್ದು ಹಿರಿಯ ಪ್ರಾಥಮಿಕ ಶಾಲೆ, ದೊಡ್ಡಕವಲಂದೆ ಗ್ರಾಮ

ಮತ್ತು ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

2) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆ, ನಂಜನಗೂಡು ಟೌನ್ ನಂಜನಗೂಡು.

3) ಮುಖ್ಯೋಪಾಧ್ಯಾಯರು, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, (ಪ್ರೌಢ ಶಾಲಾ ವಿಭಾಗ) ಸತ್ತಿ ರಸ್ತೆ, ಚಾಮರಾಜನಗರ, ಚಾಮರಾಜನಗರ ಜಿಲ್ಲೆ.

4) ಉಪ ನಿರ್ದೇಶಕರು, ಶಿಕ್ಷಣ ಇಲಾಖೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

5) ನಿರ್ದೇಶಕರು, ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 8 ನೇ ತಿರುವು, ಮಲ್ಲೇಶ್ವರಂ, ಬೆಂಗಳೂರು.

6) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

(ಪ್ರತಿನಿಧಿಸುವವರುಃ 1 ರಿಂದ 6 ನೇ ಪ್ರತಿವಾದಿಯರ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು)

****

**ಮಧ್ಯಂತರ ಅರ್ಜಿ ಸಂಖ್ಯೆ- 2**

**ಅರ್ಜಿದಾರರು** : ಮುಖ್ಯೋಪಾಧ್ಯಾಯರು

**-ವಿರುದ್ಧ-**

**ಎದುರುದಾರರು** : ಸಹಿದಾ ಬೇಗಂ

*****

**ಮಧ್ಯಂತರ ಅರ್ಜಿ ಸಂಖ್ಯೆ - 2 ರ ಕುರಿತಾದ ಆದೇಶ**

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ: 2 ನ್ನು ಪ್ರತಿವಾದಿಯರ ಪರ ವಕೀಲರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ್ದು, ಅರ್ಜಿಯೊಂದಿಗೆ ಲಗತ್ತಿಸಿರುವ ಜ್ಞಾಪನಾ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ ವಾದಿಯು ಸಲ್ಲಿಸಿರುವ ದಾವೆಯು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಬಾರದ ಕಾರಣ ವಾದಿಯು ಸಲ್ಲಿಸಿರುವ ವಾದಪತ್ರವನ್ನು ತಿರಸ್ಕೃತಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

2. ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆ. 2 ಕ್ಕೆ ಸಹಾಯಕ ಸರ್ಕಾರಿ ಅಭಿಯೋಜಕರು ಜ್ಞಾಪನ ಪತ್ರವನ್ನು ಸಲ್ಲಿಸಿದ್ದು, ಸದರಿ ಜ್ಞಾಪನಾ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-

ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ಘೋಷಣಾತ್ಮಕ ಪರಿಹಾರವನ್ನು ಮತ್ತು ನಿರ್ದೇಶನಾತ್ಮಕ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಯು ಪ್ರತಿವಾದಿಯರ ವಿರುದ್ದ ತನ್ನ ಹುಟ್ಟಿದ ದಿನಾಂಕ 04.02.1992 ಎಂಬುದರ ಬದಲಾಗಿ ದಿನಾಂಕ 20.09.1992 ಎಂದು, ತನ್ನ ಹುಟ್ಟಿದ ಸ್ಥಳ ದೊಡ್ಡಕವಲಂದೆ ಎಂಬುದರ ಬದಲಾಗಿ ಚಾಮರಾಜನಗರ ಟೌನ್ ಎಂದು ನಮೂದಾಗಿದ್ದು, ವಾದಿಯ ತಂದೆ ಹೆಸರು ಶಫಿ ಉಲ್ಲಾ ಖಾನ್ ಎಫ್ ಎಂಬುದರ ಬದಲಾಗಿ ಶಫಿ ಉಲ್ಲಾ ಖಾನ್ ಎಂದು ತಪ್ಪು ನಮೂದಾಗಿದ್ದು, ಹಾಗಾಗಿ ಪ್ರತಿವಾದಿಯರ ವಿರುದ್ದ ಘೋಷಣಾತ್ಮಕ ಪರಿಹಾರವನ್ನು ಮತ್ತು ನಿರ್ದೇಶನಾತ್ಮಕ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಯು ಈ ದಾವೆಯಲ್ಲಿ ತನ್ನ ಹುಟ್ಟಿದ ದಿನಾಂಕ, ಸ್ಥಳ ಹಾಗೂ ತಂದೆಯ ಹೆಸರನ್ನು ತಾನು ವಿದ್ಯಾಭ್ಯಾಸ ಮಾಡಿದ ಶಾಲಾ ದಾಖಲಾತಿಗಳಲ್ಲಿ ತಿದ್ದು ಪಡಿ ಮಾಡುವಂತೆ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಈ ಮೇಲ್ಕಂಡ ಪರಿಹಾರವನ್ನು ನೀಡಲು ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಹಾಗಾಗಿ ವಾದಿಯು ಕೋರಿರುವಂತೆ ಈ ನ್ಯಾಯಾಲಯದಲ್ಲಿ ಪರಿಹಾರವನ್ನು ಪಡೆಯಲು ಅಧಿಕಾರ ವ್ಯಾಪ್ತಿ ಇರುವುದಿಲ್ಲ. ತಿದ್ದುಪಡಿ ಹಾಗೂ ಬದಲಾವಣೆಯ ಕುರಿತಾಗಿ ಪರಿಹಾರವನ್ನು ಸಂಬಂಧಪಟ್ಟ

ಪ್ರಾಧಿಕಾರದ ಮೂಲಕ ಪಡೆದುಕೊಳ್ಳಬೇಕಾಗುತ್ತದೆಯೇ ಹೊರತು ಸಿವಿಲ್ ನ್ಯಾಯಾಲಯದ ಮೂಲಕ ಪಡೆಯಲು ಬರುವುದಿಲ್ಲ ಎಂಬುದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆರ್ ಎಸ್ ಎ ಸಂಖ್ಯೆ 155/2015 ರ ಪಿ.ಎಸ್ ವೇಣು ಗೋಪಾಲ್ ಯಾನೆ ಪಿ.ಎನ್ ವೇಣು ವಿರುದ್ದ ಕರ್ನಾಟಕ ರಾಜ್ಯ ಸರ್ಕಾರದ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ **29.11.2016** ರ ತೀರ್ಪಿನಲ್ಲಿ ಉಲ್ಲೇಖಿಸಿರುತ್ತದೆ. ಈ ಮೇಲ್ಕಂಡ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನ ಅನ್ವಯ ಪ್ರಸ್ತುತ ದಾವೆಯು ಸಿವಿಲ್ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ದಾವೆಯನ್ನು ಹೂಡಲು ಬರುವುದಿಲ್ಲ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ವಾದಿಯು ಸಲ್ಲಿಸಿರುವ ವಾದ ಪತ್ರವನ್ನು ತಿರಸ್ಕೃತಗೊಳಿಸಬೇಕೆಂದು ಕೋರಿರುತ್ತಾರೆ.

3. **ಈ ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆ:2 ಕ್ಕೆ ವಾದಿಯ ಪರ ವಕೀಲರು ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-**

2 ನೇ ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯು ಕಾನೂನಿನ ಅಡಿಯಲ್ಲಾಗಲಿ, ವಾಸ್ತವಿಕತೆಯ ಅಡಿಯಲ್ಲಾಗಲೀ ಊರ್ಜಿತವಾಗುವುದಿಲ್ಲ. 2 ನೇ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯಲ್ಲಿನ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ. 2 ನೇ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯಲ್ಲಿನ ಖಂಡಿಕೆ 3 ರಿಂದ 5 ರಲ್ಲಿನ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ. ವಾದಿಯು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ವ್ಯಾಸಂಗ ಮಾಡಿರುವುದರಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ಸಲ್ಲಿಸಿರುವ ದಾವೆಯು ಕಾನೂನು ಬದ್ದವಾಗಿದ್ದು, ಹಾಗಾಗಿ ಕಾನೂನಿನ ಅಡಿಯಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯ ಜನ್ಮ ದಿನಾಂಕ, ತಂದೆಯ ಹೆಸರು ಹಾಗೂ ಹುಟ್ಟಿದ ಸ್ಥಳದ ಕುರಿತಾಗಿ ಸಿವಿಲ್ ನ್ಯಾಯಾಲಯದ ಆದೇಶವನ್ನು ಹೊರತುಪಡಿಸಿ ಬೇರೆ ಮಾರ್ಗ ಇರುವುದಿಲ್ಲ. ವಾದಿಯು ವಿದ್ಯಾಭ್ಯಾಸ ಮಾಡಿದಂತಹ ಶಾಲೆಯ ವ್ಯಾಪ್ತಿಯು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಬರುವುದರಿಂದ ಈ ನ್ಯಾಯಾಲಯಕ್ಕೆ ದಾವೆಯನ್ನು ಇತ್ಯರ್ಥ ಮಾಡುವಂತಹ ಅಧಿಕಾರ ವ್ಯಾಪ್ತಿ

ಇರುತ್ತದೆ. ಹಾಗಾಗಿ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, 2 ನೇ ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

4. ಮೇಲ್ಕಂಡ ಸಂಗತಿಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಆವಗಾಹನೆಗೆ ಬರುತ್ತವೆಃ-

**ಅಂಶಗಳು**

೧. 2 ನೇ ಪ್ರತಿವಾದಿ/ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ.2 ರಲ್ಲಿ ಕೋರಿರುವಂತೆ ವಾದಿಯು ಸಲ್ಲಿಸಿರುವ ವಾದಪತ್ರವನ್ನು ತಿರಸ್ಕರಿಸಲು ಕೋರಿರುವಂತಹ ಪರಿಹಾರವನ್ನು ಪಡೆಯಲು ಅರ್ಹರೆ?

೨. ಹಾಗಿದ್ದಲ್ಲಿ ಯಾವ ಆದೇಶ?

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ವಾದಿಯ ಪರ ವಕೀಲರು ಲಿಖಿತ ವಾದ ಮಂಡನೆಯನ್ನು ಸಲ್ಲಿಸಿರುತ್ತಾರೆ.

6. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ-

ಅಂಶ – 1 : ನಕಾರಾತ್ಮಕವಾಗಿ

ಅಂಶ – 2 : ಅಂತಿಮ ಆದೇಶದಂತೆ.

**ಕಾ ರ ಣ ಗ ಳು**

7. **ಅಂಶ - 1:-** ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆಃ 2 ನ್ನು ಪ್ರತಿವಾದಿಯರ ಪರ ವಕೀಲರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ್ದು, ಅರ್ಜಿಯೊಂದಿಗೆ ಲಗತ್ತಿಸಿರುವ ಜ್ಞಾಪನಾ ಪತ್ರದಲ್ಲಿನ ಅಂಶಗಳನ್ನು ಪರಿಗಣಿಸಿ ವಾದಿಯು ಸಲ್ಲಿಸಿರುವ ದಾವೆಯು ಈ

ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಬಾರದ ಕಾರಣ ವಾದಿಯು ಸಲ್ಲಿಸಿರುವ ವಾದಪತ್ರವನ್ನು ತಿರಸ್ಕೃತಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

8. ವಾದಿಯು ಪ್ರತಿವಾದಿಯರ ವಿರುದ್ದ ತನ್ನ ಹುಟ್ಟಿದ ದಿನಾಂಕ 20.09.1990 ಅಲ್ಲವೆಂದು ಬದಲಾಗಿ ದಿನಾಂಕ 04.02.1992 ಎಂದು, ತಾನು ಹುಟ್ಟಿದ ಸ್ಥಳ ದೊಡ್ಡಕವಲಂದೆ ಎಂಬುದರ ಬದಲಾಗಿ ಚಾಮರಾಜನಗರ ಟೌನ್ ಎಂದು ನಮೂದಾಗಿದ್ದು, ವಾದಿಯ ತಂದೆ ಹೆಸರು ಶಫಿ ಉಲ್ಲಾ ಖಾನ್ ಎಫ್ ಎಂಬುದರ ಬದಲಾಗಿ ಶಫಿ ಉಲ್ಲಾ ಖಾನ್ ಎಂದು ತಪ್ಪು ನಮೂದಾಗಿದ್ದು, ಹಾಗಾಗಿ ಪ್ರತಿವಾದಿಯರ ವಿರುದ್ದ ಘೋಷಣಾತ್ಮಕ ಪರಿಹಾರವನ್ನು ಮತ್ತು ನಿರ್ದೇಶನಾತ್ಮಕ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಯು ಈ ದಾವೆಯಲ್ಲಿ ತನ್ನ ಹುಟ್ಟಿದ ದಿನಾಂಕ, ಸ್ಥಳ ಹಾಗೂ ತಂದೆಯ ಹೆಸರನ್ನು ತಾನು ವಿದ್ಯಾಭ್ಯಾಸ ಮಾಡಿದ ಶಾಲಾ ದಾಖಲಾತಿಗಳಲ್ಲಿ ತಿದ್ದು ಪಡಿ ಮಾಡುವಂತೆ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. 2 ನೇ ಪ್ರತಿವಾದಿಯು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆರ್ ಎಸ್ ಎ ಸಂಖ್ಯೆ 155/2015 ರ ಪಿ.ಎಸ್ ವೇಣು ಗೋಪಾಲ್ ಯಾನೆ ಪಿ.ಎನ್ ವೇಣು ವಿರುದ್ದ ಕರ್ನಾಟಕ ರಾಜ್ಯ ಸರ್ಕಾರದ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ **29.11.2016** ರ ತೀರ್ಪಿನಂತೆ ಈ ನ್ಯಾಯಾಲಯಕ್ಕೆ ಈ ದಾವೆಯ ಕುರಿತಾಗಿ ಅದಿವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿ ಇಲ್ಲವೆಂದು, ಹಾಗಾಗಿ ವಾದಿಯು ಸಲ್ಲಿಸಿರುವಂತಹ ವಾದಪತ್ರವನ್ನು ತಿರಸ್ಕೃತಗೊಳಿಸಬೇಕೆಂದು ಕೋರಿರುತ್ತಾರೆ. ಆದ್ದರಿಂದ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪರಿಗಣಿಸುವ ಕುರಿತಾಗಿ ಈ ಕೆಳಕಂಡ ಕಾನೂನಿನ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ.

9. **1 ನೇ ಪ್ರತಿವಾದಿಯು ಕ್ರಮಾದೇಶ 7 ನಿಯಮ 11(ಡಿ)ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಕ್ರಮಾದೇಶ 7 ನಿಯಮ 11 ರ ಕಾನೂನಿನ ಪರಿಕಲ್ಪನೆ ಈ ಕೆಳಕಂಡಂತೆ ಇರುತ್ತದೆ. ವಾದಪತ್ರವನ್ನು ತಿರಸ್ಕರಿಸುವುದು:-**

ಕೆಳಕಂಡ ಸಂಧರ್ಭಗಳಲ್ಲಿ ವಾದಪತ್ರವನ್ನು ತಿರಸ್ಕರಿಸತಕ್ಕದ್ದು.

(ಎ) ಅದರಲ್ಲಿ ವ್ಯಾಜ್ಯ ಕಾರಣವನ್ನು ತಿಳಿಸದಿರುವಲ್ಲಿ.

(ಬಿ) ಕೇಳಲಾದ ಪರಿಹಾರದ ಮೌಲ್ಯವನ್ನು ಕಡಿಮೆಯಾಗಿ ನಮೂದಿಸಿರುವಲ್ಲಿ ಮತ್ತು ತಾನು ಗೊತ್ತುಪಡಿಸಿದ ಕಾಲದೊಳಗೆ ಆ ಮೌಲ್ಯ ನಿಗದಿಯನ್ನು ಸರಿಪಡಿಸಬೇಕೆಂದು ನ್ಯಾಯಾಲಯವು ವಾದಿಯನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದಲ್ಲಿ.

(ಸಿ) ಕೇಳಲಾದ ಪರಿಹಾರದ ಮೌಲ್ಯವನ್ನು ಸರಿಯಾಗಿ ನಮೂದಿಸಿದ್ದರೂ ಸಾಕಷ್ಟು ಸ್ಟಾಂಪುಗಳಿಲ್ಲದ ಕಾಗದದ ಮೇಲೆ ವಾದಪತ್ರವನ್ನು ಬರೆದಿರುವಲ್ಲಿ ಮತ್ತು ನ್ಯಾಯಾಲಯವು ತಾನು ಗೊತ್ತುಪಡಿಸುವ ಕಾಲದೊಳಗೆ ಅಗತ್ಯವಾದ ಸ್ಟಾಂಪು ಕಾಗದವನ್ನು ವಾದಿಯು ಒದಗಿಸಬೇಕೆಂದು ಅವನನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದಲ್ಲಿ.

(ಡಿ) ವಾದಪತ್ರದಲ್ಲಿನ ಹೇಳಿಕೆಯಿಂದ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಬಂಧಿತವಾಗಿದೆಯೆಂದು ಕಂಡುಬಂದಲ್ಲಿ.

(ಇ) ಅದನ್ನು ದ್ವಿಪ್ರತಿಯಲ್ಲಿ ಹಾಜರುಪಡಿಸದಿರುವಾಗ 9 ನೇ ಉಪಬಂಧಗಳನ್ನು ಪಾಲಿಸಲು ವಾದಿಯು ವಿಫಲನಾಗಿರುವಾಗ.

ಎಫ್(9) ನೇ ನಿಯಮದ ಉಪಬಂಧಗಳನ್ನು ಪಾಲಿಸಲು ವಾದಿಯು ವಿಫಲನಾದಾಗ, ಮೌಲ್ಯ ನಿಗದಿಯನ್ನು ಸರಿಪಡಿಸಲಾಗದಂತೆ ಅಥವಾ ಅಗತ್ಯವಿರುವಷ್ಟು ಸ್ಟಾಂಪು ಕಾಗದಗಳನ್ನು ಒದಿಗಿಸಲಾಗದಂತೆ ವಾದಿಯು ಅಸಾಧಾರಣ ಸ್ವರೂಪದ ಯಾವುದೇ ಕಾರಣದಿಂದಾಗಿ ಪ್ರತಿಬಂಧಿತನಾಗಿದ್ದನೆಂದು ಮತ್ತು ಈ ಕಾಲವನ್ನು ವಿಸ್ತರಿಸಲು ನಿರಾಕರಣೆ ಮಾಡವುದರಿಂದಾಗಿ ವಾದಿಗೆ ಗುರುತರ ಅನ್ಯಾಯವುಂಟಾಗುವುದೆಂದು, ನ್ಯಾಯಾಲಯಕ್ಕೆ ಮನದಟ್ಟಾದ ಹೊರತು, ತಾನು ಅಭಿಲೇಖಿಸಬೇಕಾದ ಕಾರಣಗಳಿಗಾಗಿ, ಮೌಲ್ಯ ನಿಗದಿಯನ್ನು ಸರಿಪಡಿಸಲು ಅಥವಾ ಅಗತ್ಯವಿರುವಷ್ಟು ಸ್ಟಾಂಪು ಕಾಗದಗಳನ್ನು ಒದಗಿಸಲು ಗೊತ್ತುಪಡಿಸಿದ ಅವಧಿಯನ್ನು ಅದು ವಿಸ್ತರಿಸತಕ್ಕುದಲ್ಲ.

10. ಮೇಲ್ಕಂಡ ಉಭಯ ಪಕ್ಷಗಾರರ ವಾದವನ್ನು ಆಲಿಸಲಾಗಿ ಉಭಯ ಪಕ್ಷಗಾರರ ದಾಖಲಾತಿ ಮತ್ತು ಹೇಳಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. 1 ನೇ ಪ್ರತಿವಾದಿಯು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆರ್ ಎಸ್ ಎ ಸಂಖ್ಯೆ 155/2015 ರ ಪಿ.ಎಸ್ ವೇಣು ಗೋಪಾಲ್ ಯಾನೆ ಪಿ.ಎನ್ ವೇಣು ವಿರುದ್ದ ಕರ್ನಾಟಕ ರಾಜ್ಯ ಸರ್ಕಾರದ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ **29.11.2016** ರ ತೀರ್ಪಿನ ಅನುಸಾರವಾಗಿ ವಾದಿಯು ಸಲ್ಲಿಸಿರುವ ವಾದಪತ್ರವನ್ನು ತಿರಸ್ಕೃತಗೊಳಿಸುವಂತೆ ಕೋರಿರುತ್ತಾರೆ. ಈ ಕುರಿತು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಡಿ)ನ್ನು ಪರಿಶೀಲಿಸಲಾಗಿ ಸದರಿ ನಿಯಮದಂತೆ ವಾದಪತ್ರದಲ್ಲಿನ ಹೇಳಿಕೆಯಿಂದ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಬಂಧಿತವಾಗಿದೆಯೆಂದು ಕಂಡುಬಂದಲ್ಲಿ ವಾದಪತ್ರವನ್ನು ತಿರಸ್ಕೃತಗೊಳಿಸಲು ಅವಕಾಶ ಇರುತ್ತದೆ.

11. ಈ ಕುರಿತಾಗಿ ಕ್ರಮಾದೇಶ 7 ನಿಯಮ 11(ಡಿ) ಪರಿಶೀಲಿಸಿದಾಗ ಯಾವುದೇ ಒಂದು ದಾವೆಯಲ್ಲಿ ವಾದಿಯು ಸಲ್ಲಿಸಿದಂತಹ ದಾವೆಯು ಯಾವುದೇ ಕಾನೂನಿಗೆ ಪ್ರತಿಬಂಧಕವಾಗಿದ್ದಲ್ಲಿ ಅಂತಹ ದಾವೆಯ ಕುರಿತಾಗಿ ವಾದ ಪತ್ರವನ್ನು ತಿರಸ್ಕೃತಗೊಳ್ಳ ಬಹುದು ಎಂದು ನಮೂದು ಇರುತ್ತದೆ.

12. ಪ್ರತಿವಾದಿಯರ ಪರ ವಕೀಲರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆರ್ ಎಸ್ ಎ ಸಂಖ್ಯೆ 155/2015 ರ ಪಿ.ಎಸ್ ವೇಣು ಗೋಪಾಲ್ ಯಾನೆ ಪಿ.ಎನ್ ವೇಣು ವಿರುದ್ದ ಕರ್ನಾಟಕ ರಾಜ್ಯ ಸರ್ಕಾರದ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ **29.11.2016** ರ ತೀರ್ಪಿನ ಪ್ರಕಾರ ವಾದಿಯು ಸಲ್ಲಿಸಿರುವ ದಾವೆಯ ಕುರಿತಾಗಿ ಈ ನ್ಯಾಯಾಲಯಕ್ಕೆ ಈ ದಾವೆಯನ್ನು ಅಧಿವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿ ಇಲ್ಲ ಎಂದು ವಾದವನ್ನು

ಮಂಡಿಸಿರುತ್ತಾರೆ. ಈ ಕುರಿತು ಮೇಲ್ಕಂಡ ತೀರ್ಪುನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ನಮೂದು ಇರುತ್ತದೆಃ-

5. For any corrections in the documents pertaining to the school records like marks card or transfer certificate pertaining to plaintiff, the plaintiff as to approach the competent authority for rectification or correction of the said documents including the caste certificate or income certificate, etc,. In view of the above said ruling, a separate committee is constituted so for as caste declaration of particular person in concerned. Likewise for correction or any change of name in the school records, the competent authority is somebody else and not the civil court, which can correct the said school records.

13. ಮಾನ್ಯ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 11 ಡಿಟಿಬಿ 2014 ರ ದಿನಾಂಕ 26.10.2015 ರ ಸುತ್ತೋಲೆಯಂತೆ ವಿದ್ಯಾರ್ಥಿಗಳ ಶಾಲಾ ದಾಖಲಾತಿ ಗಳಲ್ಲಿ ವಿದ್ಯಾರ್ಥಿ ಹೆಸರು, ಪೋಷಕರ ಹೆಸರು, ಜನ್ಮ ದಿನಾಂಕ, ಜಾತಿ ಇತ್ಯಾದಿ ತಿದ್ದುಪಡಿಯ ಸಂಬಂಧ ನೀಡಿದ ನ್ಯಾಯಾಲಯಗಳ ಡಿಕ್ರಿ ಆದೇಶದ ಅನುಷ್ಠಾನದ ಕುರಿತು ಆದೇಶ ಮಾಡಿದ್ದು, ಅದರಂತೆ, ಶಾಲಾ ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ಜಾತಿಯ ಬಗ್ಗೆ ನೇರವಾಗಿ ತಿದ್ದುಪಡಿ ಮಾಡಲು ಅವಕಾಶ ಇಲ್ಲ ಎಂದು ಜಾತಿ ತಿದ್ದುಪಡಿಯ ಕುರಿತಾಗಿ ವಿಚಾರಣೆ ನಡೆಸಿ ತೀರ್ಪು ನೀಡಲು ಸಿವಿಲ್ ನ್ಯಾಯಾಲಯಕ್ಕೆ ಅವಕಾಶ ಇರುವುದಿಲ್ಲ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಯ ಜಾತಿ ತಿದ್ದು ಪಡಿ ಮಾಡುವ ಪ್ರಸ್ತಾವನೆ ಕುರಿತು ಜಿಲ್ಲಾ ಮಟ್ಟದ ಜಾತಿ ಪರಿಶೀಲನಾ ಸಮಿತಿ ನೀಡುವ ಆದೇಶದಂತೆ ಶಾಲಾ ದಾಖಲಾತಿಗಳಲ್ಲಿ ತಿದ್ದುಪಡಿ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿಯೇ ಪರಿಶೀಲಿಸಿ ಕ್ರಮ ವಹಿಸುವ ಕುರಿತು ಉಲ್ಲೇಖ ಇರುತ್ತದೆ.

14. ಈ ಮೇಲ್ಕಂಡ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪನ್ನು ಹಾಗೂ ದಿನಾಂಕ 26.10.2015 ರ ಕರ್ನಾಟಕ ಸರ್ಕಾರದ ಸುತ್ತೋಲೆಯನ್ನು

ಕೂಲಂಕುಷವಾಗಿ ಪರಿಶೀಲಿಸಲಾಗಿ, ಯಾವುದೇ ವಿದ್ಯಾರ್ಥಿಯ ಶಾಲಾ ದಾಖಲಾತಿಯಲ್ಲಿನ ಜಾತಿ ಮತ್ತು ಧರ್ಮದ ಕುರಿತಾಗಿ ನಿರ್ಣಯಿಸುವಂತಹ ಅಧಿಕಾರ ವ್ಯಾಪ್ತಿ ಈ ನ್ಯಾಯಾಲಯಕ್ಕೆ ಇಲ್ಲ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.

15. ಸಿವಿಲ್ ನ್ಯಾಯಾಲಯಕ್ಕೆ ಓರ್ವ ವ್ಯಕ್ತಿಯ ಹೆಸರನ್ನು ತಿದ್ದಪಡಿ ಮಾಡಲು ಅಥವಾ ಬದಲಾವಣೆ ಮಾಡಲು ಇರುವಂತಹ ಅಧಿಕಾರ ವ್ಯಾಪ್ತಿಯ ಕುರಿತು ನ್ಯಾಯಾಲಯವು ಈ ಕೆಳಕಂಡ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುತ್ತದೆ:-

**R.S.A.No.5214/2011 Dt. 2Nd March 2017**

**in between Kumar Kallappa Mallappa Mali and another Vs/- The State of Karnataka and others.**

It becomes clear that the findings has regards non-maintainability of the suit regarding declaration of caste is sustainable. The Civil Court has no jurisdiction to declare the caste. So to this extent the suit is not maintainable. However, the trial court has come to the conclusion that the sir name of 1st plaintiff as Mali. There is no dispute with regard to the sir name of the father as Mali. The trial court on considering the evidence has arrived at a conclusion about the sir name of 1st plaintiff as Mali based on the evidence. To this extent, the 1st Appellate court should not have interfered with the judgment of the trial court. Therefore, as regards caste, no substantial question of law arises. Judgment of the 1st Appellate court to this extent is upheld and its judgment has regards caste of 1st plaintiff is set-aside. Judgment of the trial court declaring the sir name of the 1st plaintiff has Mali is restored.

16. ಈ ಮೇಲ್ಕಂಡ ತೀರ್ಪಿನ ಅನುಪಾತವನ್ನು ಪರಿಶೀಲಿಸಲಾಗಿ ಯಾವುದೇ ಓರ್ವ ವ್ಯಕ್ತಿಯ ಹೆಸರಿಗೆ ಸಂಬಂಧಿಸಿದಂತೆ ಘೋಷಣಾತ್ಮಕ ದಾವೆಯನ್ನು ಮತ್ತು ನಿರ್ದೇಶನಾತ್ಮಕ ದಾವೆಯನ್ನು ಸಿವಿಲ್ ನ್ಯಾಯಾಲಯವು ಪರಿಗಣಿಸಬಹುದು ಎಂದು ನಿರ್ಣಯಿಸುತ್ತದೆ. ಹಾಗಾಗಿ ಈ ದಾವೆಯಲ್ಲಿ ವಾದಿಯು ಕೋರಿರುವಂತಹ ತನ್ನ ಜನ್ಮ ದಿನಾಂಕದ ಕುರಿತಾಗಿ, ತನ್ನ ಹುಟ್ಟಿದ ಸ್ಥಳದ ಕುರಿತಾಗಿ ಮತ್ತು ತಂದೆಯ ಹೆಸರಿನ ಕುರಿತಾದ ಹೆಸರನ್ನು ತಿದ್ದುಪಡಿ ಮಾಡಿಕೊಳ್ಳಲು ಈ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಬಹುದು ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

17. ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ಪ್ರತಿವಾದಿಯರು ಸಲ್ಲಿಸಿರುವ ಅರ್ಜಿಯಂತೆ ವಾದಿಯು ದಾವೆಯಲ್ಲಿ ಕೋರಿರುವ ಪರಿಹಾರದ ಕುರಿತಾಗಿ ಈ ನ್ಯಾಯಾಲಯಕ್ಕೆ ನಿರ್ಣಯವನ್ನು ನೀಡವಂತಹ ಅಧಿಕಾರ ವ್ಯಾಪ್ತಿ ಇಲ್ಲ ಎಂಬುದನ್ನು ಪರಿಗಣಿಸಲು ಬರುವುದಿಲ್ಲ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಹಾಗಾಗಿ ವಾದಿಯು ಸಲ್ಲಿಸಿರುವ ವಾದ ಪತ್ರವನ್ನು ತಿರಸ್ಕರಿಸಲು ಬರುವುದಿಲ್ಲ ಎಂದು ತಿರ್ಮಾನಕ್ಕೆ ಬರಲಾಗುತ್ತದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಂಶ 1 ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

18. **<u>ಅಂಶ 2</u>:-** ಅಂಶ 1 ನ್ನು ನಕಾರಾತ್ಮಕ ಎಂದು ನಿರ್ಣಯಿಸಿರುವುದರಿಂದ ಈ ಕೆಳಕಂಡಂತೆ ಆದೇಶವನ್ನು ಮಾಡಲಾಗಿರುತ್ತದೆಃ-

## <u>ಆದೇಶ</u>

2 ನೇ ಪ್ರತಿವಾದಿಯು ದಿವಾನಿ ಪ್ರಕ್ರಿಯ ಸಂಹಿತೆ ಕ್ರಮಾದೇಶ 7 ನಿಯಮ 11 ಸಹವಾಚನ ಕಲಂ 151 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ತಿರಸ್ಕರಿಸಲಾಗಿದೆ.

ಪ್ರಕರಣವನ್ನು ವಿವಾದಾಂಶಗಳ ರಚನೆಗಾಗಿ ನಿಗದಿಪಡಿ ದಿನಾಂಕ 16.12.2022 ಕ್ಕೆ ಮುಂದೂಡಲಾಯಿತು.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 29 ನೇ ನವೆಂಬರ್, 2022 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ನಂಜನಗೂಡು.